www.ecourtsindia.com

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

***ಸಿ.ಸಿ. ಸಂಖ್ಯೆ ಃ 809/2016***

*ಚಾಸಾ ಃ 4*

*ಪ್ರಾಸಾ ಃ 2*

| | | |
|---|---|---|
| **ಹೆಸರು** | ಃ | ಎ ವಿ ವೆಂಕಟೇಶ್ |
| **ತಂದೆಯ ಹೆಸರು** | ಃ | ವಾಸುದೇವಶೇಠ್ |
| **ವಯಸ್ಸು** | ಃ | 72 ವರ್ಷ |
| **ಉದ್ಯೋಗ** | ಃ | ನಿವೃತ್ತ ಶಿಕ್ಷಕ |
| **ವಾಸಸ್ಥಳ** | ಃ | ಚರ್ಚ್ ಸ್ಟ್ರೀಟ್, ವಿರಾಜಪೇಟೆ ನಗರ |

**ದಿನಾಂಕ ಃ *17-08-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರೀ. ಎಪಿಪಿ ವಕೀಲರಿಂದಃ-**

ಚಾಸಾ-1 ಹಾಗೂ 5 ರವರ ಪರಿಚಯವಿರುತ್ತದೆ. ಚಾಸಾ-1 ರವರು ಈಗಾಗಲೇ ಮರಣ ಹೊಂದಿರುತ್ತಾರೆ. ಚಾಸಾ-1 ರವರ ಅಂಗಡಿಯಲ್ಲಿ ಕಳ್ಳತನವಾಗಿದ್ದು, ಚಾಸಾ-1 ರವರು ಪೋಲಿಸರು ಬಂದಿರುವುದಾಗಿ ತಿಳಿಸಿ, ನನ್ನನ್ನು ಅವರ ಅಂಗಡಿಗೆ ಬರುವಂತೆ ತಿಳಿಸಿದ್ದು, ಆ ಪ್ರಕಾರ ನಾನು ಅಲ್ಲಿಗೆ ಹೋಗಿರುತ್ತೇನೆ, ಅಲ್ಲಿ ಪೋಲಿಸರು ಫ್ಯಾನ್ ಹಾಗೂ ಡಬ್ಬಿಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಇಷ್ಟು ವಿಚಾರ ಬಿಟ್ಟು ನನಗೆ ಬೇರೇನು ಗೊತ್ತಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಫ್ಯಾನ್ ಹಾಗೂ ಪ್ಲಾಸ್ಟಿಕ್ ಡಬ್ಬವನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಫ್ಯಾನ್ ನ್ನು ಮು ಮಾ 1 ಎಂದು, ಪ್ಲಾಸ್ಟಿಕ್ ಡಬ್ಬವನ್ನು ಮು ಮಾ 2 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ. ಸ. ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ದಿನಾಂಕ 14-09-2014 ರಂದು ಚಾಸಾ-1 ರವರ ಅಂಗಡಿಯಲ್ಲಿ ಕಳ್ಳತನವಾಗಿದ್ದು, ಅದನ್ನು ನೋಡುವ ಸಲುವಾಗಿ ನಾನು ಹಾಗೂ ಚಾಸಾ-5 ರವರು ಅಲ್ಲಿಗೆ ಹೋಗಿರುತ್ತೇವೆ

This is a True Copy of the Court Records Online. Authenticated @ districts.ecourtsindia.com/cnr/KAKD520013832016/truecopy/order-3.pdf

ಎಂದರೆ ಸಾಕ್ಷಿಯು ಚಾಸಾ-1 ರವರೇ ನನ್ನನ್ನು ಬರಲು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಅಲ್ಲಿಗೆ ಹೋದ ಸಮಯದಲ್ಲಿ ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಇದ್ದಿದ್ದು, ನಂತರ ಪೊಲೀಸರು ನನ್ನ ಹಾಗೂ ಚಾಸಾ-5 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಒಂದು ಫ್ಯಾನ್ ಹಾಗೂ ಪ್ಲಾಸ್ಟಿಕ್ ಡಬ್ಬವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮಹಜರಿಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಪೋಲಿಸರು ಬರೆದ ಮಹಜರ ಇದೆ ಅಲ್ಲವೆ ಎಂದು ಕೇಳಲಾಗಿ, ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದು, ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ಮಹಜರನ್ನು ನಿಪಿ3 ಎಂದು, ಸಾಕ್ಷಿಯ ಸಹಿಯನ್ನು ನಿಪಿ3ಎ ಎಂದು ಗುರುತಿಸಲಾಯಿತು. ನಂತರ ನಾನು ಈ ಬಗ್ಗೆ ಪೋಲಿಸರಿಗೆ ಒಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

**ಪಾಟಿ ಸವಾಲು : ಶ್ರೀ. ಡಿ ಎಂ ಕೆ 3ನೇ ಆರೋಪಿ ಪರ ವಕೀಲರಿಂದ :**

ಚಾಸಾ-1 ರವರ ಅಂಗಡಿಗೂ ಹಾಗೂ ನನ್ನ ಅಂಗಡಿಗೂ ಸುಮಾರು 150 ಅಡಿ ಅಂತರವಿರುತ್ತದೆ. ಚಾಸಾ-1 ಹಾಗೂ ನಾನು ಬಹಳ ವರ್ಷಗಳಿಂದ ತುಂಬಾ ಪರಿಚಿತರು ಎಂದರೆ ಸರಿ. ನಾನು ಚಾಸಾ-1 ರವರ ಅಂಗಡಿಗೆ ಹೋದಾಗ ಅಲ್ಲಿ ಸುಮಾರು ಜನ ಸೇರಿದ್ದರು. ಚಾಸಾ-1 ರವರ ಅಂಗಡಿ ಮುಖ್ಯ ರಸ್ತೆಯ ಪಕ್ಕದಲ್ಲೆ ಇದ್ದು, ಅಲ್ಲಿ ಯಾವಾಗಲು ಜನರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಅವರ ಅಂಗಡಿಯ ಅಕ್ಕಪಕ್ಕ ಹಲವಾರು ಅಂಗಡಿಗಳು ಇವೆ ಎಂದರೆ ಸರಿ. ಮು ಮಾ 1 ಹಾಗೂ 2 ರಲ್ಲಿ ನನ್ನ ಸಹಿ ಇರುವ ಚೀಟಿ ಇರುವುದಿಲ್ಲ ಎಂದರೆ ಸರಿ. ನಿಪಿ 3 ರಲ್ಲಿ ಪೋಲಿಸರು ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಿಪಿ 3 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮು ಮಾ 1 ಹಾಗೂ 2 ಕ್ಕೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ನಿಪಿ3 ರಂತೆ ಮಹಜರ ಕ್ರಮ ಜರುಗಿಸಿ, ಮು ಮಾಲು 1 ಹಾಗೂ 2 ನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನಗೆ ಪರಿಚಯಸ್ಥರಾದ ಕಾರಣ ಅವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KAKD520013832016/truecopy/order-3.pdf
www.ecourtsindia.com

(1 ನೇ ಆರೋಪಿ ಪರ ವಕೀಲರು 3 ನೇ ಆರೋಪಿ ಪರ ವಕೀಲರು ನಡೆಸಿದ ಪಾಟಿ ಸವಾಲನ್ನು ಅಳವಪಡಿಸಿಕೊಳ್ಳುವಂತೆ ಕೋರಿದ್ದು, ಅವರ ಕೋರಿಕೆಯನ್ನು ಪರಿಗಣಿಸಿ, 3 ನೇ ಆರೋಪಿ ಪರ ವಕೀಲರು ನಡಸಿದ ಪಾಟಿ ಸವಾಲನ್ನು 1 ನೇ ಆರೋಪಿ ಪರವಾಗಿ ಅಳವಡಿಸಿಕೊಳ್ಳಲಾಯಿತು.)

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.

This is a True Copy of the Court Records Online. Authenticated @ districts.ecourtsindia.com/cnr/KAKD520013832016/truecopy/order-3.pdf

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ವಿರಾಜಪೇಟೆ**
***ಸಿ.ಸಿ. ಸಂಖ್ಯೆ : 809/2016***

***ಚಾಸಾ : 5***
***ಪ್ರಾಸಾ : 3***

| | | |
|---|---|---|
| **ಹೆಸರು** | : | ಎಂ ವೆಂಕಶೇಟ್ ಸೇಠ್ |
| **ತಂದೆಯ ಹೆಸರು** | : | ಮಂಜುನಾಥ ಶೇಠ್ |
| **ವಯಸ್ಸು** | : | 65 ವರ್ಷ |
| **ಉದ್ಯೋಗ** | : | ಚಿನ್ನದ ಅಂಗಡಿ |
| **ವಾಸಸ್ಥಳ** | : | ತೆಲುಗರ ಬೀದಿ, ವಿರಾಜಪೇಟೆ ನಗರ |

**ದಿನಾಂಕ : *17-08-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ. ಎಪಿಪಿ ವಕೀಲರಿಂದ :-**

ಚಾಸಾ-1 ಹಾಗೂ 4 ರವರ ಪರಿಚಯವಿರುತ್ತದೆ. ಚಾಸಾ-1 ರವರು ಈಗಾಗಲೇ ಮರಣ ಹೊಂದಿರುತ್ತಾರೆ. ದಿನಾಂಕ 14-09-2014 ರಂದು ಚಾಸಾ-1 ರವರ ಅಂಗಡಿಯಲ್ಲಿ ಕಳ್ಳತನವಾಗಿದ್ದು, ದಿನಾಂಕ 15-09-2014 ರಂದು ಸಂಜೆ ಸಮಯದಲ್ಲಿ ಪೋಲಿಸರು ಅಲ್ಲಿಗೆ ಮಹಜರ ಕ್ರಮ ಜರುಗಿಸಲು ಬಂದಿದ್ದು, ಚಾಸಾ-1 ರವರು ಪೋಲಿಸರು ಬಂದಿರುವುದಾಗಿ ತಿಳಿಸಿ, ನನ್ನನ್ನು ಅವರ ಅಂಗಡಿಗೆ ಬರುವಂತೆ ತಿಳಿಸಿದ್ದು, ಆ ಪ್ರಕಾರ ನಾನು ಅಲ್ಲಿಗೆ ಹೋಗಿರುತ್ತೇನೆ, ಅಲ್ಲಿ ಪೋಲಿಸರು ಮಹಜರ ಕ್ರಮ ಜರುಗಿಸಿ, ಫ್ಯಾನ್ ಹಾಗೂ ಡಬ್ಬಿಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಸಾಕ್ಷಿಗೆ ನಿಪಿ*3* ನ್ನು ತೋರಿಸಲಾಗಿ, ಸಾಕ್ಷಿಯು ಅದು ಪೋಲಿಸರು ಜರುಗಿಸಿದ ಮಹಜರು ಎಂದು ಗುರುತಿಸಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ*3(ಬಿ)* ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು ಮಾ 1 ಹಾಗೂ 2 ನ್ನು ನೋಡಿ ಗುರುತಿಸುತ್ತಾರೆ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟಿ ಸವಾಲು : ಶ್ರೀ. ಡಿ ಎಂ ಕೆ *3* ನೇ ಆರೋಪಿ ಪರ ವಕೀಲರಿಂದ :**

ನನ್ನ ಚಿನ್ನದ ಅಂಗಡಿಯೂ ಚಾಸಾ-1 ರವರ ಅಂಗಡಿಯ ಎದುರುಗಡೆ ಇರುತ್ತದೆ. ನಾನು ಚಾಸಾ-1 ರವರ ಅಂಗಡಿಗೆ ಹೋದಾಗ ಪೋಲಿಸರು, ಚಾಸಾ-4 ಹಾಗೂ ಇತರ

This is a True Copy of the Court Records Online. Authenticated @ districts.ecourtsindia.com/cnr/KAKD520013832016/truecopy/order-3.pdf

www.ecourtsindia.com

ಮೂರ್ನಾಲ್ಕು ಜನ ಇದ್ದಿರುತ್ತಾರೆ. ಚಾಸಾ-1 ರವರ ಅಂಗಡಿಯ ಅಕ್ಕಪಕ್ಕ ಹಲವಾರು ಅಂಗಡಿಗಳಿವೆ ಎಂದರೆ ಸರಿ. ಪೋಲಿಸರು ಮು ಮಾ 1 ಹಾಗೂ 2 ಕ್ಕೆ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಾವು ಮಹಜರಿಗೆ ಮಾತ್ರ ಸಹಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ 3 ರಲ್ಲಿ ಪೋಲಿಸರು ಏನು ಬರೆದಿರುತ್ತಾರೆ ಎಂದು ತನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ3 ಮಹಜರಿಗೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-1 ರವರು ಒಂದೇ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ಮು ಮಾ 1 ಹಾಗೂ 2 ಕ್ಕೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ನಿಪಿ3 ರಂತೆ ಮಹಜರ ಕ್ರಮ ಜರುಗಿಸಿ, ಮು ಮಾಲು 1 ಹಾಗೂ 2 ನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಜನಾಂಗದವರಾದ ಕಾರಣ ಅವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**(**1 ನೇ ಆರೋಪಿ ಪರ ವಕೀಲರು 3 ನೇ ಆರೋಪಿ ಪರ ವಕೀಲರು ನಡೆಸಿದ ಪಾಟಿ ಸವಾಲನ್ನು ಅಳವಪಡಿಸಿಕೊಳ್ಳುವಂತೆ ಕೋರಿದ್ದು, ಅವರ ಕೋರಿಕೆಯನ್ನು ಪರಿಗಣಿಸಿ, 3 ನೇ ಆರೋಪಿ ಪರ ವಕೀಲರು ನಡಸಿದ ಪಾಟಿ ಸವಾಲನ್ನು 1 ನೇ ಆರೋಪಿ ಪರವಾಗಿ ಅಳವಡಿಸಿಕೊಳ್ಳಲಾಯಿತು.**)**

ಮರು ವಿಚಾರಣೆ ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.**)**

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.

This is a True Copy of the Court Records Online. Authenticated @ districts.ecourtsindia.com/cnr/KAKD520013832016/truecopy/order-3.pdf

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com
This is a True Copy of the Court Records Online. Authenticated @ districts.ecourtsindia.com/cnr/KAKD520013832016/truecopy/order-3.pdf